"ಮಧುರ ಮಕ್ಕಳೇ - ಈಗ ನೀವು ಪವಿತ್ರ ಜೀವಾತ್ಮರಾಗಬೇಕಾಗಿದೆ. ಈ ಸಮಯದಲ್ಲಿ ಯಾರೂ ಪವಿತ್ರ ಜೀವಾತ್ಮರಿಲ್ಲ ಆದ್ದರಿಂದ ತಮ್ಮನ್ನು ಮಹಾತ್ಮರೆಂದೂ ಸಹ ಕರೆಸಿಕೊಳ್ಳಲು ಸಾಧ್ಯವಿಲ್ಲ"

ಪ್ರಶ್ನೆ: ಸತ್ಯಯುಗೀ ರಾಜ್ಯಪದವಿಯ ಪಾರಿತೋಷಕವು ಯಾವ ಮಕ್ಕಳಿಗೆ ಪ್ರಾಪ್ತಿಯಾಗುತ್ತದೆ?

ಉತ್ತರ: ಯಾರು ಶ್ರೀಮತದನುಸಾರ ನೆನಪಿನ ಸ್ಪರ್ಧೆಯಲ್ಲಿ ನಂಬರ್‌ವನ್ ಹೋಗುತ್ತಾರೆ ಅವರಿಗೇ ರಾಜ್ಯಪದವಿಯ ಪಾರಿತೋಷಕವು ಸಿಗುತ್ತದೆ. ತೀಕ್ಷ್ಣ ಓಟವಿದ್ದರೆ ದಾಖಲೇ ಪಟ್ಟಿಯಲ್ಲಿ ಒಳ್ಳೆಯ ಹೆಸರಿರುವುದು ಮತ್ತು ಪಾರಿತೋಷಕದ ಅಧಿಕಾರಿಗಳಾಗುತ್ತೀರಿ. ನೀವು ಮಕ್ಕಳು ದೂರಾಂದೇಶಿಗಳಾಗಿ ಬಹಳ ದೂರದ ರೇಸ್ ಮಾಡುತ್ತೀರಿ. ಒಂದು ಸೆಕೆಂಡಿನಲ್ಲಿ ಪರಮಧಾಮದವರೆಗೆ ತಲುಪಿ ಹಿಂತಿರುಗಿ ಬರುತ್ತೀರಿ. ನಿಮ್ಮ ಬುದ್ಧಿಯಲ್ಲಿದೆ- ನಾವು ಮುಕ್ತಿಯಲ್ಲಿ ಹೋಗುತ್ತೇವೆ ನಂತರ ಜೀವನ್ಮುಕ್ತಿಯಲ್ಲಿ ಬರುತ್ತೇವೆ. ನಿಮ್ಮ ತರಹ ರೇಸನ್ನೂ ಮತ್ಯಾರೂ ಮಾಡಲು ಸಾಧ್ಯವಿಲ್ಲ.

ಗೀತೆ: ಕೊನೆಗೂ ಆ ದಿನ ಇಂದು ಬಂದಿತು............

ಓಂ ಶಾಂತಿ. ಕೊನೆಗೂ ಆ ದಿನ ಇಂದು ಬಂದಿತು ಎಂಬುದನ್ನು ಯಾರು ತಿಳಿದಿದ್ದೀರಿ? ಮಕ್ಕಳಿಗೆ ಗೊತ್ತಿದೆ- ಕೊನೆಗೂ ಆ ದಿನ ಇಂದು ಬಂದಿತು, ನಾವು ತಂದೆಯ ಸಮ್ಮುಖದಲ್ಲಿದ್ದೇವೆ. ಆತ್ಮವು ಈ ಶರೀರದ ಮುಖಾಂತರ ಹೇಳುತ್ತದೆ. ಈಗ ನೀವು ಕುಳಿತಿದ್ದೀರಿ. ನಿಮಗೆ ಗೊತ್ತಿದೆ- ನಾವಾತ್ಮರು ಈಗ ಪರಮಪಿತ ಪರಮಾತ್ಮನ ಸಮ್ಮುಖದಲ್ಲಿ ಕುಳಿತಿದ್ದೇವೆ. ಅವಶ್ಯವಾಗಿ 5000 ವರ್ಷಗಳ ಹಿಂದೆಯೂ ಸಹ ನಾವಾತ್ಮರು ಅಂದರೆ ಜೀವಾತ್ಮರು ಪರಮಾತ್ಮನೊಂದಿಗೆ ಸಮ್ಮುಖದಲ್ಲಿ ಮಿಲನ ಮಾಡಿದ್ದೆವು. ಇದು ನನ್ನ ಶರೀರವೆಂದು ಆತ್ಮವೇ ಹೇಳುತ್ತದೆ. ಇದು ನನ್ನ ಆತ್ಮವೆಂದು ಶರೀರವು ಹೇಳುವುದಿಲ್ಲ. ಕೊನೆಗೂ ನಾವಾತ್ಮರ ತಂದೆಯು ಇಂದು ಬಂದಿದ್ದಾರೆ. ಭಕ್ತಿಯ ನಂತರ ಜ್ಞಾನವನ್ನು ಕೊಡಲು ಅವಶ್ಯವಾಗಿ ಬರಲೇಬೇಕಾಗಿದೆ. ಜ್ಞಾನದಿಂದ ಸದ್ಗತಿ ಮಾಡಲು ಕೊನೆಗೂ ಬಂದಿದ್ದಾರೆ, ಇದನ್ನು ಪ್ರಪಂಚವು ಅರಿತುಕೊಂಡಿಲ್ಲ. ಇಡೀ ಪ್ರಪಂಚದ ಸಮ್ಮುಖದಲ್ಲಿರಲೂ ಸಾಧ್ಯವಿಲ್ಲ. ನೀವು ಮಕ್ಕಳಿಗೂ ನಂಬರ್‌ವಾರ್ ಪುರುಷಾರ್ಥದನುಸಾರ ನಿಶ್ಚಯವಿದೆ. ಮೊದಲಂತೂ ಆತ್ಮನಿಶ್ಚಯ ಮಾಡಿಕೊಳ್ಳುತ್ತೀರಿ. ನಂತರ ತಂದೆಯು ಪುನಃ ಬಂದಿದ್ದಾರೆಂದು ನಿಶ್ಚಯ ಮಾಡುತ್ತೀರಿ. ಎಲ್ಲರೂ ಹೀಗೆಯೇ ನಿಶ್ಚಯ ಮಾಡಿಕೊಳ್ಳುತ್ತೀರೆಂದು ನೀವು ತಿಳಿಯುತ್ತೀರಿ ಆದರೆ ಈ ರೀತಿಯಿಲ್ಲ. ಇವರು ಇಂತಹ ವಿಚಿತ್ರ ತಂದೆಯಾಗಿದ್ದಾರೆ. ಅವರ ನೆನಪು ಗಳಿಗೆ-ಗಳಿಗೆಯೂ ಮರೆತುಹೋಗುತ್ತದೆ. ನಾವಾತ್ಮರಾಗಿದ್ದೇವೆ, ಪರಮಪಿತ ಪರಮಾತ್ಮನ ಸಮ್ಮುಖದಲ್ಲಿದ್ದೇವೆ- ಇದನ್ನು ಮರೆತುಹೋಗುತ್ತೀರಿ. ಪತಿತ ಜೀವಾತ್ಮರನ್ನು ಪಾವನ ಮಾಡಲು ಪರಮಪಿತ ಪರಮಾತ್ಮ ಬರುತ್ತಾರೆ ಎನ್ನುವುದಂತೂ ಪ್ರಪಂಚವೂ ಅರಿತುಕೊಂಡಿದೆ. ಜೀವಾತ್ಮರು ಆತ್ಮರನ್ನು ಪಾವನ ಮಾಡಲು ಬರುವುದಿಲ್ಲ. ಎಲ್ಲರೂ ಜೀವಾತ್ಮರಾಗಿದ್ದಾರೆ, ಪರಮಪಿತ ಪರಮಾತ್ಮ ಒಬ್ಬರೇ ಆಗಿದ್ದಾರೆ ಅವರನ್ನು ಜೀವ ಎಂದು ಹೇಳುವುದಿಲ್ಲ ಏಕೆಂದರೆ ಅವರಿಗೆ ಯಾವುದೇ ಸ್ಥೂಲ ಅಥವಾ ಸೂಕ್ಷ್ಮ ಶರೀರವಿಲ್ಲ. ಇದನ್ನು ತಂದೆಯು ಕುಳಿತು ತಿಳಿಸುತ್ತಾರೆ. ನೀವು ಯಾರೇ ನಾಮಧಾರಿಯನ್ನು ನೋಡುತ್ತೀರಿ, ಬ್ರಹ್ಮಾ-ವಿಷ್ಣು-ಶಂಕರನ ಚಿತ್ರವನ್ನು ನೋಡುತ್ತೀರಿ ಅವರು ಸೂಕ್ಷ್ಮವತನದಲ್ಲಿ ಇರುತ್ತಾರೆ ಅಂದಮೇಲೆ ಅವರೂ ಸಹ ಸೂಕ್ಷ್ಮ ಜೀವಾತ್ಮರಾದರು. ಇದೆಲ್ಲವೂ ತಿಳಿದುಕೊಳ್ಳುವ ಮಾತುಗಳಾಗಿವೆ. ಇಂತಹವರು ಮಹಾತ್ಮರಾಗಿದ್ದಾರೆಂದು ಮನುಷ್ಯರು ಭಲೆ ಹೇಳುತ್ತಾರೆ ಆದರೆ ಪತಿತ ಪ್ರಪಂಚದಲ್ಲಿ ಮಹಾತ್ಮರು ಎಲ್ಲಿಂದ ಬರಲು ಸಾಧ್ಯ! ಇಲ್ಲಿ ಯಾರೂ ಸುಪ್ರೀಂ ಪಾವನರಾಗಲು ಸಾಧ್ಯವಿಲ್ಲ. ಹಾ! ಆ ಸುಪ್ರೀಂ ತಂದೆಯು ಪಾವನ ಮಾಡಿ ಹೋಗಿದ್ದಾರೆ. ಸತ್ಯಯುಗದ ಆದಿಯಲ್ಲಿ ದೇವಿ-ದೇವತೆಗಳಿದ್ದರು, ಪವಿತ್ರ ಆತ್ಮಗಳಿದ್ದರು ಈಗ ಪತಿತ, ಜೀವಾತ್ಮರಿದ್ದಾರೆ ಎನ್ನುವುದಂತೂ ಅವಶ್ಯವಾಗಿ ತಿಳಿದುಕೊಳ್ಳುತ್ತಾರೆ. ಪಾವನ ಜೀವಾತ್ಮರಿದ್ದರು. ಅವಶ್ಯವಾಗಿ ಸತ್ಯಯುಗದ ಆದಿಯಿಂದ ಸೃಷ್ಟಿಯಲ್ಲಿ ಪವಿತ್ರ ಜೀವಾತ್ಮರಿದ್ದರು ಅವರನ್ನು ಮಹಾನ್ ಆತ್ಮರೆಂದು ಹೇಳುತ್ತಾರೆ. ಈ ಪತಿತ ಪ್ರಪಂಚದಲ್ಲಿ ಯಾರೂ ಮಹಾತ್ಮರಿರಲು ಸಾಧ್ಯವಿಲ್ಲ. ಎಲ್ಲರೂ ಪತಿತ ಜೀವಾತ್ಮರೆಂದು ತಂದೆಯು ತಿಳಿಸುತ್ತಾರೆ. ಪತಿತ ಜೀವಾತ್ಮರು ಅವಶ್ಯವಾಗಿ ಅನ್ಯರನ್ನು ಪತಿತರನ್ನಾಗಿಯೇ ಮಾಡುತ್ತಾರೆ. ಸತ್ಯಯುಗದಲ್ಲಿ ಪವಿತ್ರ ಜೀವಾತ್ಮರಿರುತ್ತಾರೆ ಅಂದಮೇಲೆ ಏನು ಮಾಡುತ್ತಾರೆ? ಅಲ್ಲಿ ಪವಿತ್ರ ಜೀವಾತ್ಮರನ್ನಾಗಿ ಮಾಡುವುದಿಲ್ಲ, ಅಲ್ಲಿ ಮಾಡುವ ಮಾತೇ ಇರುವುದಿಲ್ಲ. ಈ ಸಮಯದಲ್ಲಿ ಎಲ್ಲರೂ ಪವಿತ್ರ ಜೀವಾತ್ಮರಾಗುತ್ತೀರಿ ಅಲ್ಲಂತೂ ಎಲ್ಲರೂ ಪಾವನರೇ ಇರುತ್ತಾರೆ. ಇಷ್ಟೊಂದು ಆತ್ಮಗಳನ್ನು ಪಾವನರನ್ನಾಗಿ ಮಾಡುವವರು ಯಾರು? ತಂದೆಯು ತಿಳಿಸುತ್ತಾರೆ- ನೀವು ಯಾವಾಗ ದೇವಿ-ದೇವತೆಗಳಾಗಿದ್ದಿರಿ ಆಗ ಪಾವನರಾಗಿದ್ದಿರಿ ಇಲ್ಲಿಗೆ ಬಂದು ಪತಿತರಾಗಿದ್ದೀರಿ. ಇದು ಪಾಪ ಜೀವಾತ್ಮರ ಪ್ರಪಂಚವಾಗಿದೆ. ಈ ಶಬ್ಧವನ್ನು ಸ್ಪಷ್ಟವಾಗಿ ತಿಳಿಸಬೇಕು- ಪಾಪ ಜೀವಾತ್ಮ ಏಕೆಂದರೆ ಆತ್ಮವೂ ಪತಿತವಾಗಿದೆ, ಶರೀರವೂ ಪತಿತವಾಗಿದೆ ಮತ್ತೆ ಸತ್ಯಯುಗದಲ್ಲಿ ಮಹಾತ್ಮ ಎನ್ನುವ ಶಬ್ಧವನ್ನು ಹೇಳುವುದಿಲ್ಲ ಏಕೆಂದರೆ ಅಲ್ಲಂತೂ ಎಲ್ಲರೂ ಪವಿತ್ರರಿರುತ್ತಾರೆ. ದೇವಿ-ದೇವತೆಗಳೆಂದು ಕರೆಯುತ್ತಾರೆ. ಸರ್ವಗುಣ ಸಂಪನ್ನ, 16 ಕಲಾಸಂಪೂರ್ಣ, ಅಹಿಂಸಾ ಪರಮೋಧರ್ಮ ಜೀವಾತ್ಮರಾಗಿರುತ್ತಾರೆ. ಸಂಪೂರ್ಣ ನಿರ್ವಿಕಾರಿಗಳೆಂದರೆ ಸಂಪೂರ್ಣ ಪವಿತ್ರರು.

ನೀವು ಮಕ್ಕಳಿಗೆ ತಿಳಿಸಲಾಗುತ್ತದೆ- ಸನ್ಯಾಸಿಗಳು ಪವಿತ್ರರಾಗಿರಲು ಪುರುಷಾರ್ಥಿಗಳಾಗಿದ್ದಾರೆ. ಒಳ್ಳೊಳ್ಳೆಯ ಸನ್ಯಾಸಿಗಳು ಪವಿತ್ರರಾಗಿರುತ್ತಾರೆ ಅವರನ್ನು ಮಹಾತ್ಮರೆಂದು ಹೇಳಲಾಗುತ್ತದೆ. ಪವಿತ್ರರಾಗಿರುವುದಕ್ಕೋಸ್ಕರ ಬೇರೆ ಇರುತ್ತಾರೆ ಆದರೆ ಅವರಂತೂ ನಿವೃತ್ತಿ ಮಾರ್ಗದವರಾಗಿದ್ದಾರೆ. ಅವರನ್ನು ಭಕ್ತಿಮಾರ್ಗದಲ್ಲಿ ಮಹಾತ್ಮರು ಎನ್ನುತ್ತಾರೆ, ಜ್ಞಾನಮಾರ್ಗದಲ್ಲಲ್ಲ. ಜ್ಞಾನ ಮತ್ತು ಭಕ್ತಿ ಬೇರೆ-ಬೇರೆ ಎಂದು ಗಾಯನ ಮಾಡಲಾಗುತ್ತದೆ. ಅರ್ಧಕಲ್ಪ ಸತ್ಯಯುಗ, ತ್ರೇತಾದಲ್ಲಿ ಜ್ಞಾನದ ಪ್ರಾಲಬ್ಧವಿರುತ್ತದೆ, ಮತ್ತೆ ಇಲ್ಲಿ ಭಕ್ತಿಯ ಪ್ರಾಲಬ್ಧವೆಂದು ಹೇಳುತ್ತಾರೆ. ಇದು ಭಕ್ತಿಮಾರ್ಗವಾಗಿದೆ, ಮೊದಲು ಭಕ್ತಿಯು ಅವ್ಯಭಿಚಾರಿಯಾಗಿರುತ್ತದೆ ನಂತರ ಅಂತ್ಯದಲ್ಲಿ ತಮೋಪ್ರಧಾನ ವ್ಯಭಿಚಾರಿ ಭಕ್ತಿಯಾಗುತ್ತದೆ. ಈಗ ವ್ಯಭಿಚಾರಿ ಭಕ್ತಿಯ ಅಂತ್ಯವಾಗಿದೆ ಆದ್ದರಿಂದ ತಂದೆಯು ಬಂದಿದ್ದಾರೆ. ತಂದೆಯು ಒಮ್ಮೆ ಬಂದು ಜ್ಞಾನದಿಂದ ಅರ್ಧಕಲ್ಪಕ್ಕಾಗಿ ನಿಮ್ಮ ಪ್ರಾಲಬ್ಧವನ್ನು ರೂಪಿಸುತ್ತಾರೆ. ನೀವು ನಂಬರ್ವನ್ ಪುರುಷಾರ್ಥ ಮಾಡುತ್ತೀರಿ. ಅದರಲ್ಲಿ ಕೆಲವರಂತೂ ರಾಜ-ರಾಣಿಯಾಗುತ್ತಾರೆ. ಇನ್ನೂ ಕೆಲವರು ಪ್ರಜೆಗಳು ಅಥವಾ ದಾಸ-ದಾಸಿಯಾಗಿಬಿಡುತ್ತಾರೆ ಏಕೆಂದರೆ ರಾಜಧಾನಿಯು ಸ್ಥಾಪನೆಯಾಗುತ್ತಾ ಇದೆ.

ಈಗ ನೀವು ದೂರಾಂದೇಶಿ ಬುದ್ಧಿಯವರಾಗುತ್ತೀರಿ. ದೂರಾಂದೇಶಿ ಬುದ್ಧಿಯವರಿಗೆ ತ್ರಿಕಾಲದರ್ಶಿಗಳೆಂದು ಕರೆಯಲಾಗುತ್ತದೆ. ಯಾರಿಗೆ ಮೂರು ಲೋಕಗಳೂ, ಮೂರುಕಾಲಗಳ ಜ್ಞಾನವಿರುತ್ತದೆಯೋ ಅವರಿಗೆ ತ್ರಿಕಾಲದರ್ಶಿಗಳೆಂದು ಕರೆಯಲಾಗುತ್ತದೆ. ನೀವೀಗ ಮೂರುಕಾಲಗಳನ್ನು ಅರಿತುಕೊಂಡಿದ್ದೀರಿ. ಮೂಲವತನ, ಸೂಕ್ಷ್ಮವತನ, ಸ್ಥೂಲವತನ ಮೂರು ಲೋಕಗಳಾಯಿತಲ್ಲವೆ. ಈಗ ನೀವು ದೂರಾಂದೇಶಿಗಳಾಗಿಬಿಟ್ಟಿದ್ದೀರಿ. ನಿಮ್ಮ ಬುದ್ಧಿಯು ಆದಿಯಿಂದ ಅಂತ್ಯದತನಕ ಹೋಗುತ್ತದೆ- ನಂಬರ್ವಾರ್ ಪುರುಷಾರ್ಥದನುಸಾರ. ಯಾರು ಬಲಹೀನರಾಗಿರುತ್ತಾರೆ ಅವರು ರೇಸ್ನಲ್ಲಿ ಹಿಂದುಳಿಯುತ್ತಾರೆ, ಇದಂತೂ ಬಹಳ ದೊಡ್ಡ ದೂರಾಂದೇಶಿ ರೇಸ್ ಆಗಿದೆ. ಆತ್ಮಗಳ ರೇಸನ್ನೂ ಎಂದೂ ಕೇಳಿರುವುದಿಲ್ಲ. ನೀವಾತ್ಮರು ತಿಳಿದುಕೊಂಡಿದ್ದೀರಿ- ನಾವು ವಿದ್ಯಾರ್ಥಿಗಳಾಗಿದ್ದೇವೆ, ಇದು ನಮ್ಮ ರೇಸ್ ಆಗಿದೆ. ಇಂತಹ ಗುರಿಯವರೆಗೆ ತಲುಪಿ ಪುನಃ ಬರಬೇಕಾಗಿದೆ. ನೀವಾತ್ಮರದು ಅತೀ ದೂರದ ರೇಸ್ ಆಗಿದೆ. ಬುದ್ಧಿಗೆ ಗೊತ್ತಿದೆ- ನಾವು ವಾಸ್ತವದಲ್ಲಿ ಅಲ್ಲಿನ ನಿವಾಸಿಗಳಾಗಿದ್ದೇವೆ. ಒಂದು ಸೆಕೆಂಡಿನಲ್ಲಿ ನಾವು ಅಲ್ಲಿಗೆ ತಲುಪಿಬಿಡುತ್ತವೆ. ಜೀವನ್ಮುಕ್ತರಾಗಿಬಿಡುತ್ತೇವೆ. ನಾವು ಮೂಲತಃ ಪರಮಧಾಮದ ನಿವಾಸಿಗಳಾಗಿದ್ದೇವೆ. ನಾವು ಪರಮಧಾಮಕ್ಕೆ ಹೋಗುತ್ತೇವೆ ನಂತರ ಬರುತ್ತೇವೆಂದು ಯಥಾರ್ಥ ರೀತಿಯಲ್ಲಿ ಬುದ್ಧಿಯು ತಿಳಿದುಕೊಂಡಿದೆ. ಹೇಗೆ ರೇಸ್ನಲ್ಲಿ ಗುರಿಯವರೆಗೆ ತಲುಪಿ ಮತ್ತೆ ಹಿಂತಿರುಗುತ್ತಾರೆ. ನಾವೂ ಸಹ ತಂದೆಯ ಬಳಿ ಹೋಗುತ್ತೇವೆ ಮತ್ತೆ ಹಿಂತಿರುಗಿ ಬರುತ್ತೇವೆ. ಈಗ ಆತ್ಮಗಳು ರೇಸ್ ಕಲಿಯುತ್ತಿದ್ದೀರಿ. ನೀವು ಎಲ್ಲರಿಗೂ ಹೇಳುತ್ತೀರಿ- ಮನ್ಮನಾಭವ, ಬುದ್ಧಿಯೋಗವನ್ನು ತಮ್ಮ ತಂದೆ ಪರಮಾತ್ಮನೊಂದಿಗೆ ಜೋಡಿಸಿ, ಅಲ್ಲಿ ನೀವು ಅಶರೀರಿಯಾಗಿರುತ್ತೀರಿ. ಇದು ಕೇವಲ ನಿಮ್ಮ ಬುದ್ಧಿಯಲ್ಲಿಯೇ ಯಥಾರ್ಥ ರೀತಿಯಲ್ಲಿದೆ. ಮೂರುಕಾಲಗಳು, ಮೂರು ಲೋಕಗಳ ಜ್ಞಾನವು ನಿಮ್ಮ ಬುದ್ಧಿಯಲ್ಲಿದೆ. 84 ಜನ್ಮಗಳ ಜ್ಞಾನವು ಮತ್ಯಾರಲ್ಲಿಯೂ ಇರಲು ಸಾಧ್ಯವಿಲ್ಲ. ನಿಮಗೆ ಗೊತ್ತಿದೆ- ನಾವು ಈ ಛೀ, ಛೀ ಪ್ರಪಂಚದಿಂದ, ಛೀ ಛೀ ಶರೀರದಿಂದ ಮುಕ್ತರಾಗಿ ಹೋಗಬೇಕಾಗಿದೆ, ನಾವು ಹೋಗುತ್ತಿದ್ದೇವೆಂದು ತಂದೆಯು ಪ್ರತಿನಿತ್ಯ ಈ ರೇಸನ್ನು ಕಲಿಸುತ್ತಾರೆ, ನಿಮ್ಮ ರೇಸ್ ಅವಿನಾಶಿಯಾಗಿದೆ. ತಂದೆಯನ್ನು ಎಷ್ಟು ನೆನಪು ಮಾಡುತ್ತೀರೋ ಅಷ್ಟು ನಿಮ್ಮ ದಾಖಲಾತಿಪಟ್ಟಿಯಲ್ಲಿ ಒಳ್ಳೆಯ ಹೆಸರಿರುವುದು. ಇವರ ಬುದ್ಧಿಯ ಯಾತ್ರೆಯು ಬಹಳ ತೀಕ್ಷ್ಣವಾಗಿದೆ ಎಂದು ಹೇಳುತ್ತಾರೆ. ನೆನಪಿನಿಂದಲೇ ವಿಕರ್ಮ ವಿನಾಶವಾಗುತ್ತದೆ. ನೆನಪು ಮಾಡದಿದ್ದರೆ ವಿಕರ್ಮ ವಿನಾಶವಾಗದ ಕಾರಣ ಹಿಂದೆಯೇ ಉಳಿದುಬಿಡುತ್ತಾರೆ. ಪ್ರಜೆ ಅಥವಾ ದಾಸ-ದಾಸಿಯರಾಗುವುದು ಇದು ಯಾವುದೇ ಬಹುಮಾನವಲ್ಲ. ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮಿಯಾಗುವುದು - ಇದನ್ನೇ ಪಾರಿತೋಷಕವೆಂದು ಹೇಳಲಾಗುವುದು. ತಂದೆಯು ರಾಜ್ಯಪದವಿಯ ಬಹುಮಾನವನ್ನು ಕೊಡುತ್ತಾರೆ. ಒಂದುವೇಳೆ ಅವರ ಮತದಂತೆ ನಡೆದು ಓಟವನ್ನು ಓಡಿದರೆ ಮಾತ್ರ. ಕೆಲವರಂತೂ ಎರಡು ಹೆಜ್ಜೆಯಷ್ಟೂ ಓಡುವುದಿಲ್ಲ. ಒಂದುವೇಳೆ ಪ್ರಜಾಪದವಿಯನ್ನು ಪಡೆಯುವವರಾಗಿದ್ದರೆ ಸಂಪೂರ್ಣ ಕಡಿಮೆ ದರ್ಜೆಯನ್ನು ಪಡೆಯುತ್ತಾರೆ. ಇಲ್ಲಿರುವವರಾಗಿದ್ದರೂ ರಾಜಧಾನಿಯಲ್ಲಿ ಬಹಳ ಕಡಿಮೆ ಪದವಿಯನ್ನು ಪಡೆಯುತ್ತಾರೆ. ನಿಮ್ಮ ಬುದ್ಧಿಯು ಎಷ್ಟೊಂದು ವಿಶಾಲವಾಗಿದೆ.

ಈಗ ಬೆಂಗಳೂರು, ಮದ್ರಾಸಿನ ಮಕ್ಕಳು ಕುಳಿತಿದ್ದಾರೆ ಅವರಿಗೆ ಮದ್ರಾಸಿ ಭಾಷೆಯಲ್ಲಿ ಯಾರಾದರೂ ಕುಳಿತು ತಿಳಿಸಿಕೊಡಿ. ನಮ್ಮ ಭಾಷೆಯಂತೂ ಹಿಂದಿಯಾಗಿದೆ. ನಿಮಗೆ ಕಲ್ಪದ ಹಿಂದೆಯೂ ಹೀಗೆಯೇ ತಿಳಿಸಿರಬೇಕು. ಭಗವಂತನು ಎಲ್ಲಾ ಭಾಷೆಗಳನ್ನು ಏಕೆ ಅರಿತುಕೊಂಡಿಲ್ಲ ಎಂದು ಕೇಳುತ್ತಾರೆ ಆದರೆ ಡ್ರಾಮಾದಲ್ಲಿಲ್ಲ. ಡ್ರಾಮಾದಲ್ಲಿದ್ದಿದ್ದರೆ ನಾನು ಎಲ್ಲಾ ಭಾಷೆಗಳಲ್ಲಿ ಭಾಷಣ ಮಾಡುತ್ತಿದ್ದೆನು. ತಿಳಿದುಕೊಳ್ಳಿ- ಭಿನ್ನ-ಭಿನ್ನ ಭಾಷೆಯವರು ಒಟ್ಟಿಗೆ ಕುಳಿತಿದ್ದರೆ ನಾನು ಎಲ್ಲಾ ಭಾಷೆಗಳಲ್ಲಿ ಕುಳಿತು ಹೇಳಲು ಸಾಧ್ಯವೇ? ಇದಂತೂ ಆಗಲು ಸಾಧ್ಯವಿಲ್ಲ. ಒಬ್ಬೊಬ್ಬರಿಗೂ ಸಹ ಎಲ್ಲಿಯತನಕ ತಿಳಿಸುವುದು, ಶಬ್ದವು ಹೆಚ್ಚಾಗಿಬಿಡುತ್ತದೆ ಆದ್ದರಿಂದ ತಿಳಿಸಬೇಕು- ತಂದೆಯು ಕಲ್ಪದ ಹಿಂದೆ ಯಾವ ಭಾಷೆಯಲ್ಲಿ ತಿಳಿಸಿದ್ದರೋ ಅದೇ ಭಾಷೆಯಲ್ಲಿ ತಿಳಿಸುತ್ತಾರೆ ಆದ್ದರಿಂದ ಹಿಂದಿಭಾಷೆಯು ಮುಖ್ಯವಾಗಿದೆ. ಆಂಗ್ಲಭಾಷೆಯು ಅವಶ್ಯವಾಗಿ ಏಕೆಂದರೆ ಎಲ್ಲರ ಸಂಬಂಧವು ಆಂಗ್ಲರೊಂದಿಗೆ ಹೆಚ್ಚಿಗೆ ಇದೆ. ರಷ್ಯಾ, ಅಮೇರಿಕಾ ಮುಂತಾದಾವರ ಭಾಷೆಯು ತಮ್ಮತಮ್ಮದೇ ಆಗಿದೆ. ಒಂದೇ ಧರ್ಮದವರು ಕ್ರಿಶ್ಚಿಯನ್ ಆಗಿದ್ದಾರೆ. ಆದರೆ ಭಾಷೆಗಳು ಬಹಳ ಇದೆ. ಇಲ್ಲಿಯೂ ಸಹ ಎಲ್ಲರೂ ಭಾರತವಾಸಿ ಆದಿಸನಾತನ ದೇವಿ-ದೇವತಾ ಧರ್ಮದವರಾಗಿದ್ದೀರಿ ಆದರೆ ತಮ್ಮ ಧರ್ಮವನ್ನು ಮರೆತುಬಿಟ್ಟಿದ್ದೀರಿ. ಎಷ್ಟೊಂದು ಭಾಷೆಗಳಾಗಿಬಿಟ್ಟಿದೆ. ಎಲ್ಲವೂ ಕಲಬೆರಕೆಯಾಗಿದೆ. ಯಾರದು ಯಾವ

ಭಾಷೆಯೋ ಅವರಿಗೆ ಆ ಭಾಷೆಯಲ್ಲಿ ತಿಳಿಸಬೇಕು. ಇದರಲ್ಲಿಯೂ ಬಹಳ ಬುದ್ಧಿವಂತರಾಗಿರಬೇಕು, ಅವರು ಅರಿತುಕೊಂಡು ಅನ್ಯರಿಗೆ ತಿಳಿಸಬೇಕು. ಜೊತೆಗಾರರು ಇಂತಹ ಜೊತೆಗಾರರನ್ನು ತರಬೇಕು, ಅವರು ಚಾಚೂ ತಪ್ಪದೆ ತಿಳಿಸಿಕೊಡುವಂತಿರಬೇಕು. ಇದು ಎಲ್ಲದಕ್ಕಿಂತ ದೊಡ್ಡ ಚೈತನ್ಯ ತೀರ್ಥಸ್ಥಾನವಾಗಿದೆ. ಅವೆಲ್ಲವೂ ಜಡ ತೀರ್ಥಗಳಾಗಿವೆ. ಅಲ್ಲಿ ಸಾಧು-ಸಂತ, ಮಹಾತ್ಮರು ಎಲ್ಲರೂ ಹೋಗುತ್ತಾರೆ. ಬಹಳ ದೂರ-ದೂರ ಹೋಗುತ್ತಾರೆ. ಯಾರು ಭಾರತವನ್ನು ಪಾವನ ಮಾಡಿ ಹೋಗಿದ್ದಾರೆ ಅವರ ಮಂದಿರದಲ್ಲಿ ಹೋಗುತ್ತಾರೆ. ಇವೂ ಸಹ ತಿಳಿದುಕೊಳ್ಳುವ ಮಾತುಗಳಾಗಿವೆಯಲ್ಲವೆ. ತಂದೆಯು ತಿಳಿಸುತ್ತಾರೆ- ವೃಕ್ಷದ ರೆಂಬೆ-ಕೊಂಬೆ ಎಲೆಗಳ ಅದರ ವಿಸ್ತಾರವನ್ನು ಎಷ್ಟು ತಿಳಿಸುವುದು! ಇವಂತೂ ಚಿಕ್ಕ-ಚಿಕ್ಕ ರೆಂಬೆ-ಕೊಂಬೆಗಳಾಗಿವೆಯಲ್ಲವೆ. ರೆಂಬೆಗಳಲ್ಲಿಯೂ ಎಷ್ಟೊಂದು ಎಲೆಗಳಿರುತ್ತವೆ ಅನೇಕ ಮಠ-ಪಂಥಗಳಿವೆ. ನಿಮ್ಮ ಬುಡವಂತೂ ಎಷ್ಟೊಂದು ದೊಡ್ಡದಾಗಿರಬೇಕು, ಎಷ್ಟೊಂದು ಎಲೆಗಳಿರಬೇಕು. ಆದಿಸನಾತನ ದೇವಿ-ದೇವತಾ ಧರ್ಮವು ಸತ್ಯಯುಗದಿಂದ ಹಿಡಿದು ನಡೆಯುತ್ತಾ ಬಂದಿದೆ ಅಂದಾಗ ಎಷ್ಟು ಜನ ಹಿಂದೂಗಳಿರುತ್ತಾರೆ ಆದರೆ ಹಿಂದೂಗಳಾಗಿ ಉಳಿದಿಲ್ಲ. ಅವರು ಅನ್ಯಧರ್ಮಗಳಲ್ಲಿ ಸೇರಿಹೋಗಿದ್ದಾರೆ. ಇದು ಕಲ್ಪವೃಕ್ಷವಾಗಿದೆ, ಪ್ರಾರಂಭದಲ್ಲಿ ಆದಿಸನಾತನ ದೇವಿ-ದೇವತಾ ಧರ್ಮದವರಿದ್ದರು. ಹಿಂದೂಗಳೆಂದು ಕರೆಸಿಕೊಳ್ಳುವವರೂ ಸಹ ವಾಸ್ತವದಲ್ಲಿ ಆದಿಸನಾತನ ದೇವಿ-ದೇವತಾ ಧರ್ಮದವರಾಗಿದ್ದಾರೆ ಆದರೆ ಅನ್ಯಧರ್ಮಗಳಲ್ಲಿ ಮತಾಂತರ ಹೊಂದಿದ್ದಾರೆ. ತಂದೆಯು ತಿಳಿಸುತ್ತಾರೆ - ನಾನು ಬಂದು ಪುನಃ ಆ ದೇವಿ-ದೇವತೆಗಳೆಂದು ಕರೆಸಿಕೊಳ್ಳುವವರ ಧರ್ಮದ ಸ್ಥಾಪನೆ ಮಾಡುತ್ತೇನೆ. ಯಾರು ಮತಾಂತರಹೊಂದಿದ್ದಾರೆ ಅವರೇ ಬಂದು ಪುನಃ ಆಸ್ತಿಯನ್ನು ತೆಗೆದುಕೊಳ್ಳುತ್ತಾರೆ. ಯಾವಾಗ ದೇವಿ-ದೇವತೆಗಳೆಂದು ಕರೆಸಿಕೊಳ್ಳುವವರು ಒಬ್ಬರೂ ಇರುವುದಿಲ್ಲವೋ ಆಗಲೇ ತಂದೆಯು ಬರುತ್ತಾರೆ, ಬಂದು ತಿಳಿಸುತ್ತಾರೆ- ನಿಮ್ಮ ಜಡ ನೆನಪಾರ್ಥವು ನಿಂತಿದೆ. ಕ್ರಿಸ್ತನು ಬರುವ ಮೊದಲು ಅವರ ಧರ್ಮದ ಚರ್ಚ್ ಇತ್ಯಾದಿಗಳು ಇರುವುದಿಲ್ಲ. ಆದರೆ ಇಲ್ಲಂತೂ ಈಗಲೂ ದೇವತೆಗಳ ಮಂದಿರ ಮುಂತಾದ ಗುರುತುಗಳಿವೆ. ಯಾವಾಗ ನಿಮ್ಮ ರಾಜ್ಯವಿರುವುದೋ ಆಗ ಕ್ರೈಸ್ಟ್ ಮುಂತಾದವರ ಹೆಸರು, ಗುರುತು ಇರುವುದಿಲ್ಲ. ಇಲ್ಲಂತೂ ಎಲ್ಲರ ಹೆಸರು, ಗುರುತುಗಳಿವೆ, ನಿಮಗೆ ಗೊತ್ತಿದೆ- ಕ್ರೈಸ್ಟ್ ಯಾವಾಗ ಬಂದರು, ಕ್ರಿಶ್ಚಿಯನ್ ಧರ್ಮವು ಹೇಗೆ ಸ್ಥಾಪನೆಯಾಯಿತು? ಈಗ ಕ್ರೈಸ್ಟ್ ಯಾವ ಶರೀರದಲ್ಲಿ ಇರಬಹುದು? ಅವಶ್ಯವಾಗಿ ಪತಿತ ಶರೀರದಲ್ಲಿಯೇ ಇರುವರು. ಅವರಂತೂ ಪಾವನರಾಗಿದ್ದರಲ್ಲವೆ. ನೀವು ಮಕ್ಕಳ ಬುದ್ಧಿಯಲ್ಲಿ ಇಡೀ ಜ್ಞಾನವಿದೆ. ನಿಮ್ಮನ್ನು ದೂರಾಂದೇಶಿಗಳನ್ನಾಗಿ ಮಾಡಲಾಗಿದೆ. ನಾವಾತ್ಮಗಳು ಎಲ್ಲಿರುತ್ತೇವೆ? ಎಲ್ಲಿಂದ ಬರುತ್ತೇವೆ? ಇದು ಯಾರಿಗೂ ಗೊತ್ತಿಲ್ಲ. ಇರುವ ಸ್ಥಾನವನ್ನೇ ಪರಮಾತ್ಮನೆಂದು ನಂಬಿಕೊಂಡಿದ್ದಾರೆ. ವಾಸ್ತವದಲ್ಲಿ ಆತ್ಮವು ಸುಳ್ಳಾದಾಗ ಶರೀರವೂ ಸುಳ್ಳಾಗಿಬಿಡುತ್ತದೆ. ಸಾಧು-ಸಂತರು ಸುಳ್ಳು ಮಾಯ ಸುಳ್ಳು ಕಾಯ...... ಬಾಕಿ ಆತ್ಮವಂತೂ ನಿರ್ಲೇಪವೆಂದು ಹೇಳಿಬಿಡುತ್ತಾರೆ. ತಮಗೆ ಇಷ್ಟಬಂದಂತೆ ಏನು ಬರುತ್ತದೆಯೋ ಅದನ್ನು ಹೇಳಿಬಿಡುತ್ತಾರೆ. ಸುಳ್ಳು ಆತ್ಮ, ಆತ್ಮನ ಶರೀರವು ಸುಳ್ಳು, ಈ ರೀತಿ ಏಕೆ ಹೇಳುವುದಿಲ್ಲ! ಶರೀರವನ್ನೇ ಚಟ್ಟದ ಮೇಲೆ ಕೂರಿಸುತ್ತಾರೆ, ಆತ್ಮವನ್ನಂತೂ ಕೂರಿಸುವುದಿಲ್ಲ. ಚಟ್ಟದ ಮೇಲೆ ಶರೀರವನ್ನೇ ಇಡಲಾಗುತ್ತದೆ. ಆತ್ಮವಂತೂ ಒಂದು ಶರೀರವನ್ನು ಬಿಟ್ಟು ಇನ್ನೊಂದು ಶರೀರದಲ್ಲಿ ಹೋಗಿ ಪ್ರವೇಶ ಮಾಡಿತು, ಇದು ತಿಳುವಳಿಕೆಯ ಮಾತಾಗಿದೆ. ಯಾವುದೇ ಸಾಧು-ಸಂತ ಮುಂತಾದವರಿಗೆ ನೀವು ತಿಳಿಸಬಹುದು. ಇಲ್ಲಿ ಪತಿತ ಪ್ರಪಂಚದಲ್ಲಿ ಯಾರೂ ಮಹಾತ್ಮರಿಲ್ಲ. ಮಹಾನ್ ಆತ್ಮರಿಗೆ ಪಾವನ ಆತ್ಮರೆಂದು ಕರೆಯಲಾಗುತ್ತದೆ ಅಂದಮೇಲೆ ಶರೀರವೂ ಸಹ ಪಾವನ ಶರೀರವೇ ಬೇಕು. ಇದು ಕಬ್ಬಿಣದ ಸಮಾನ ಪ್ರಪಂಚವಾಗಿದೆ ಆದರೆ ಕನ್ಯೆಯು ಎಲ್ಲಿಯವರೆಗೆ ವಿಕಾರದಲ್ಲಿ ಹೋಗುವುದಿಲ್ಲವೋ ಅಲ್ಲಿಯವರೆಗೆ ಪೂಜಿಸಲಾಗುತ್ತದೆ. ಪವಿತ್ರತೆಗೋಸ್ಕರ ಕರೆಯುತ್ತಾರೆ- ಬಂದು ನಮ್ಮನ್ನು ಪಾವನ ಮಾಡಿ ಎಂದು. ಮಹಾತ್ಮರಂತೂ ಯಾರೂ ಇಲ್ಲ. ಇವರು ವಿಚಿತ್ರ ಪರಮಪಿತ ಪರಮಾತ್ಮನಾಗಿದ್ದಾರೆ. ನಿಮಗೆ ಗೊತ್ತಿದೆ- ನಾವು ಯಾವ ಪಾವನ ಜೀವಾತ್ಮಗಳು ದೇವಿ-ದೇವತೆಗಳಾಗಿದ್ದೆವು ಈಗ ಪತಿತರಾಗಿಬಿಟ್ಟಿದ್ದೇವೆ. ಧರ್ಮಭ್ರಷ್ಟರಾಗಿದ್ದೇವೆ. ಕ್ರಿಶ್ಚಿಯನ್ನರು ತಮ್ಮ ಧರ್ಮವನ್ನು ಅರಿತುಕೊಂಡಿದ್ದಾರೆ. ನಾವು ಕ್ರಿಶ್ಚಿಯನ್ನರೆಂದು ತಕ್ಷಣ ಹೇಳಿಬಿಡುತ್ತಾರೆ. ಆದರೆ ನೀವು ಶ್ರೇಷ್ಠಾತಿಶ್ರೇಷ್ಠ ಧರ್ಮದವರು ತಮ್ಮ ಧರ್ಮವನ್ನು ಮರೆತುಬಿಟ್ಟಿದ್ದೀರಿ. ಮರೆತಿರುವ ಕಾರಣ ಧರ್ಮಭ್ರಷ್ಟ, ಕರ್ಮಭ್ರಷ್ಟರಾಗಿಬಿಟ್ಟಿದ್ದೀರಿ. ನೀವು ಶ್ರೇಷ್ಠಾಚಾರಿಯಾಗಿದ್ದಿರಿ. ಈಗ ರಾವಣನು ಭ್ರಷ್ಟಾಚಾರಿಯನ್ನಾಗಿ ಮಾಡಿಬಿಟ್ಟಿದ್ದಾನೆ. ಇದರ ಅರ್ಥವನ್ನು ನೀವು ತಿಳಿದುಕೊಂಡಿದ್ದೀರಿ. ನೀವು ಮಕ್ಕಳು ಈಗ ತಮ್ಮ ಭವಿಷ್ಯ ಶ್ರೇಷ್ಠ ಅದೃಷ್ಟವನ್ನು ರೂಪಿಸಿಕೊಳ್ಳಲು ಧಾರಣೆ ಮಾಡುತ್ತಿದ್ದೀರಿ. ಶ್ರೀಮತದ ಉಲ್ಲಂಘನೆ ಮಾಡುವುದರಿಂದ ಅದೃಷ್ಟಕ್ಕೆ ಬರೆ ಬೀಳುತ್ತದೆ. ಶ್ರೀಮತವನ್ನು ಕೊಡುವವರು ತಂದೆಯಾಗಿದ್ದಾರೆ ಎಂಬುದನ್ನು ಮರೆತುಬಿಟ್ಟಿದ್ದಾರೆ ಅಂದಾಗ ಕೊನೆಗೂ ಆ ದಿನ ಇಂದು ಬಂದಿತು, ಇದನ್ನು ನೀವು ತಿಳಿದಿದ್ದೀರಿ. ಎಲ್ಲರೂ ಸ್ಪಷ್ಟವಾಗಿ ತಿಳಿದಿಲ್ಲಾ. ಅಂತ್ಯದಲ್ಲಿ ತಿಳಿದುಕೊಳ್ಳುತ್ತಾರೆ ಆಗ ಪೂರ್ತಿ ತಿಳಿದುಕೊಳ್ಳುತ್ತಾರೆ. ಈಗಂತೂ ಘಳಿಗೆ-ಘಳಿಗೆಯೂ ಮರೆತುಹೋಗುತ್ತಾರೆ. ಪರಿಶ್ರಮಪಟ್ಟು ಸತ್ಯವನ್ನು ತಿಳಿಸುತ್ತಾರೆ ಆದರೆ ಅಸತ್ಯವನ್ನು ಹೇಳುವುದರಲ್ಲಿ ನಿಧಾನಿಸುವುದಿಲ್ಲ. ಮಾಯೆಯು ಒಳ್ಳೊಳ್ಳೆಯ ಮಕ್ಕಳಿಗೆ ಜೋರಾಗಿ ಪೆಟ್ಟು ಕೊಡುತ್ತದೆ. ತಂದೆಯಂತೂ ಎಲ್ಲರನ್ನು ತಿಳಿದುಕೊಂಡಿದ್ದಾರೆ. ತಿಳಿಸುತ್ತಾರೆ- ನೀವು ತಪ್ಪು ಮಾಡುತ್ತೀರಿ, ಬಹಳ ಸೇವಾಭಂಗ ಮಾಡುತ್ತೀರಿ ಎಂದು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೂರಾಂದೇಶಿಗಳಾಗಿ ಮೂರುಲೋಕಗಳು ಮತ್ತು ಮೂರೂ ಕಾಲಗಳನ್ನು ಅರಿತು ಬುದ್ಧಿಯಿಂದ ರೇಸ್ ಮಾಡಬೇಕಾಗಿದೆ. ಈ ಛೀ ಛೀ ಶರೀರದಿಂದ ಮುಕ್ತರಾಗಬೇಕಾಗಿದೆ.

2. ಸುಳ್ಳು ಹೇಳುವ ಅಭ್ಯಾಸವನ್ನು ತೆಗೆದುಹಾಕಬೇಕಾಗಿದೆ. ಶ್ರೀಮತದ ಉಲ್ಲಂಘನೆ ಮಾಡಿ ಸೇವಾಭಂಗ ಮಾಡಬಾರದು.

ವರದಾನ: ಲೌಕಿಕ ವೃತ್ತಿ-ದೃಷ್ಟಿಯನ್ನು ಪರಿವರ್ತನೆ ಮಾಡಿಕೊಂಡು ಅಲೌಕಿಕತೆಯ ಅನುಭವವನ್ನು ಮಾಡುವಂತಹ ಜ್ಞಾನಿಆತ್ಮಾಭವ

ಲೌಕಿಕ ಸಂಬಂಧಗಳಲ್ಲಿರುತ್ತಾ ಅಲ್ಪಕಾಲದ ಸಂಬಂಧವನ್ನು ನೋಡದೆ, ಆತ್ಮವನ್ನು ನೋಡಿರಿ. ಆತ್ಮವನ್ನು ನೋಡುವುದರಿಂದ ಒಂದು ಖುಷಿಯಾಗುತ್ತದೆ, ಇಲ್ಲವೆಂದರೆ ದಯೆಬರುತ್ತದೆ. ಈ ಆತ್ಮನು ಪಾಪ ಪರವಶನಾಗಿದೆ, ಅಜ್ಞಾನದಲ್ಲಿದೆ, ಬುದ್ಧಿಹೀನನಾಗಿದೆ, ನಾನು ಜ್ಞಾನಿ ಆತ್ಮನಿದ್ದೇನೆ, ಅಂದಮೇಲೆ ಆ ತಿಳಿಯದಿರುವ ಆತ್ಮನಮೇಲೆ ದಯೆತೋರುತ್ತಾ, ತಮ್ಮ ಶುಭಭಾವನೆಯಿಂದ ಪರಿವರ್ತನೆ ಮಾಡಿತೋರಿಸುತ್ತೇನೆ. ತಮ್ಮ ವೃತ್ತಿ ಮತ್ತು ದೃಷ್ಟಿಯನ್ನು ಪರಿವರ್ತನೆ ಮಾಡಿಕೊಳ್ಳುವುದೇ ಅಲೌಕಿಕ ಜೀವನವಾಗಿದೆ, ಯಾವ ಕಾರ್ಯವನ್ನು ಅಜ್ಞಾನಿಗಳು ಮಾಡುತ್ತಾರೆಯೋ, ಅದನ್ನು ತಾವು ಜ್ಞಾನಿಆತ್ಮರು ಮಾಡಲು ಸಾಧ್ಯವಿಲ್ಲ. ಅವರಿಗೆ ತಮ್ಮ ಸಂಗದ ರಂಗು ನಾಟಬೇಕು.

ಸ್ಲೋಗನ್: ತಮ್ಮ ಶ್ರೇಷ್ಠ ಕರ್ಮದಿಂದ ವಿಶ್ವಪಿತನ ಹೆಸರನ್ನು ಪ್ರಸಿದ್ಧಗೊಳಿಸುವುದೇ ವಿಶ್ವಕಲ್ಯಾಣಕಾರಿ ಆಗುವುದಾಗಿದೆ.